ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

## ಜೈನ್ ವಸತಿ ಶಾಲೆ ಶುಭಾರಂಭ

**ಬೆಂಗಳೂರು:** ಜೈನ್ ವಸತಿ ಶಾಲೆ ಇಲ್ಲಿ ನಡೆಯುತ್ತಿರುವ ಬಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಹಿಮಾಂಶು ವಿರುದ್ಧ 26-18 ಸೆಟ್‌ಗಳಿಂದ ಗೆದ್ದು ಶುಭಾರಂಭ ಮಾಡಿತು.

ನಗರದ ಕಂಠೀರವ ಕ್ರೀಡಾಂಗಣದಲ್ಲಿ ರೋಟರಿ ಇಂದಿರಾನಗರ ಕ್ಲಬ್ ವತಿಯಿಂದ ನಡೆಯುತ್ತಿರುವ 10ನೇ ಅಂತರ್ ಶಾಲಾ ಬಾಲಕ-ಬಾಲಕಿಯರ ಬಾಸ್ಕೆಟ್‌ಬಾಲ್ ಟೂರ್ನಮೆಂಟ್‌ನ ಬಾಲಕರ ವಿಭಾಗದಲ್ಲಿ ನಗರದ ಜೈನ್ ವಸತಿ ಶಾಲೆ ಇಲ್ಲಿ ನಡೆಯುತ್ತಿರುವ ಬಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ಹಿಮಾಂಶು ಶಾಲೆ ವಿರುದ್ಧ 26-18 ಸೆಟ್‌ಗಳಿಂದ ಗೆದ್ದಿತ್ತು. ಎರಡನೇ ಪಂದ್ಯದಲ್ಲಿ ಲಿಟಲ್ ಫ್ಲವರ್ ಪಬ್ಲಿಕ್ ಶಾಲೆ ಕ್ರೈಸ್ಟ್ ಹೈ ಸ್ಕೂಲ್ ಶಾಲೆಯನ್ನು 35-30 ಅಂಕಗಳಿಂದ ಮಣಿಸಿತು.

ಮೂರನೇ ಪಂದ್ಯದಲ್ಲಿ ನ್ಯಾಷನಲ್ ಹಿಲ್ ವೀವ್ ಪಬ್ಲಿಕ್ ಶಾಲೆ ಟಿಐಎಸ್‌ಬಿ ಶಾಲೆಯನ್ನು 30-28 ಅಂಕಗಳಿಂದ ಮಣಿಸಿತು. 4ನೇ ಪಂದ್ಯದಲ್ಲಿ ಕೋರಮಂಗಲದ ನ್ಯಾಷನಲ್ ಪಬ್ಲಿಕ್ ಶಾಲೆ ಸೆಂಟ್ ಜೋಸೆಫ್ ಶಾಲೆಯನ್ನು 22-10 ಅಂಕಗಳಿಂದ ಮಣಿಸಿತು.